ಓ ಎಸ್ ಃ335/2022
ಪಿ ಡಬ್ಲ್ಯೂಃ1

ದಿನಾಂಕಃ 15.02.2024 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ 1 ಮತ್ತು 2 ರ ಪರವಾಗಿ ಶ್ರೀ ಬಿ.ಬಿ ಆರ್ ವಕೀಲರಿಂದ</u>**

ಪ್ರತಿವಾದಿ 1 ಮತ್ತು 2 ರವರು ನನಗೆ ಆಸ್ತಿ ಕೊಡುವುದಿಲ್ಲ ಎಂದು ತಕರಾರು ಹಾಕಿರುತ್ತಾರೆ. ನನ್ನ ಮಾವ ಬಸವರಾಜಯ್ಯನಿಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಸಿದ್ದಮ್ಮ, ಎರಡನೇ ಹೆಂಡತಿ ಜಯ್ಯಮ್ಮ. ವಂಶ ವೃಕ್ಷವನ್ನು ನನ್ನ ವಾದ ಪತ್ರದಲ್ಲಿ ತೋರಿಸಿರುತ್ತೇನೆ. ವಂಶ ವೃಕ್ಷವನ್ನು ನಾನೇ ಹೆಳಿ ಬರೆಸಿರುತೇನೆ. ಮೊದಲನೆ ಹೆಂಡತಿ ಸಿದ್ದಮ್ಮನಿಗೆ ಒಬ್ಬನೇ ಮಗ ರೇವಣಸಿದ್ದಯ್ಯ. ಎರಡನೇ ಹೆಂಡತಿ ಜಯ್ಯಮ್ಮನಿಗೆ ಇಬ್ಬರು ಮಕ್ಕಳು. ಬಸವರಾಜಯ್ಯನ ಮೊದಲನೆ ಹೆಂಡತಿ ಹೆಸರು ಬಸಮ್ಮ ಎಂದರೆ ಸರಿ. ಬಸವರಾಜಯ್ಯನಿಗೆ ಶಿವಲಿಂಗಮ್ಮ ಎಂಬ ಹೆಸರಿನ ಹೆಂಡತಿ ಇರುವುದಿಲ್ಲ. ನನ್ನ ತೋರಿಸಿದ ವಂಶವೃಕ್ಷದಲ್ಲಿ ಶಿವಲಿಂಗಮ್ಮ ಎಂಬ ಹೆಸರನ್ನು ತಪ್ಪಾಗಿ ತೋರಿಸಿದ್ದೇನೆ ಎಂದರೆ ಸರಿ. ಬಸವರಾಜಯ್ಯನಿಗೆ ಸಿದ್ದಮ್ಮ ಎಂಬ ಹೆಸರಿನ ಹೆಂಡತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ವನೆಯಲ್ಲಿ ಬಸಮ್ಮನಿಗೆ ಸಿದ್ದಮ್ಮ ಎಂದು ಕರೆಯುತ್ತಿದ್ದರು ಎಂದರೆ ಸರಿ. ಆ ರೀತಿ ಕರೆಯುತ್ತಿದ್ದರು ಎಂದು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ.

ದಾವಾ ಆಸ್ತಿಗಳು ನನ್ನ ಮಾವನ ತಂದೆಯಿಂದ ಬಂದ ಆಸ್ತಿಗಳಾಗಿವೆ. ದಾವಾ ಆಸಿತಗಳು ನನ್ನ ಮಾವನ ತಂದೆಯಿಂದ ಬಂದಿರುತ್ತವೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ. ದಾವಾ ಆಸ್ತಿ -1 ನಮ್ಮ ಮಹದೇವಯ್ಯನಿಂದ (ಮಾವನ ತಂದೆ) ಬಂದ ಆಸ್ತಿ. ದಾವಾ ಆಸ್ತಿ -2 ನ್ನು 2 ನೇ ಪ್ರತಿವಾದಿ ಸ್ವಂತಕ್ಕೆ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ದಿಃ 19.04.1996 ರಂದು 2 ನೇ ಪ್ರತಿವಾದಿ ದಾವಾ ಆಸ್ತಿ -2 ನ್ನು ಸಿ.ಎಸ್ ನಾಗರಾಜಪ್ಪ ಮತ್ತು ಸಿ.ಆರ್ ವಿಜಯ್ ಕುಮಾರ್ ಅವರಿಂದ ಸ್ವತಃ ಶುದ್ದ ಕ್ರಯಕ್ಕೆ ಕೊಂಡ ಆಸ್ತಿಯಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ-2 ಮೊದಲು ನನ್ನ ಮಾವ ಬಸವರಾಜಯ್ಯನ ಹೆಸರಿನಲ್ಲಿತ್ತು. ನಮ್ಮ ಮಾವನ ಹೆಸರಿಗೆ ಇದ್ದ ದಾಖಲೆಯನ್ನು ತಂದು ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿ -2 ನನ್ನ ಮಾವ ಬಸವರಾಜಯ್ಯನಿಂದ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. .

ನನ್ನ ಮಾವ ಬಸವರಾಜಯ್ಯ ನನ್ನ ಮದುವೆಯಾಗಿ 2 ವರ್ಷದ ನಂತರ ತೀರಿಕೊಂಡಿರುತ್ತಾರೆ. ನನ್ನ ಮಾವ ಬಸವರಾಜಯ್ಯನ ಹೆಸರಿಗೆ ಕಣ ಇದೆ. ಕಣ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಕಣ ಆಸ್ತಿಯನ್ನು ಸೇರಿಸದೆ ಇದ್ದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಗಳನ್ನು ಸುಮಾರು 16 ವರ್ಷಗಳ ಹಿಂದೆ ನೋಡಿದ್ದೇನೆ. ದಾವಾ ಆಸ್ತಿಗಳು ಅಸ್ತಿತ್ವದಲ್ಲಿ ಇದ್ದ ಬಗ್ಗೆ ನನಗೆ ಗೊತ್ತು. ದಾವಾ ಆಸ್ತಿ -1 ಗೋಮಾಳ ಆಸ್ತಿ ಎಂದರೆ ಸರಿ. ದಾವಾ ಆಸ್ತಿ -1 ನ್ನು ರೈಲ್ವೆ ಇಲಾಖೆಯವರು ರೈಲ್ವೆಗಾಗಿ ವಶಪಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 18.05.2020 ರಂದು ದಾವಾಆಸ್ತಿ -1 ನ್ನು ರೈಲ್ವೆ

ಇಲಾಖೆಯವರು ವಶಪಡಿಸಿಕೊಂಡಿದಕ್ಕೆ ಪರಿಹಾರ ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ -1 ಗೋಮಾಳ ಆಸ್ತಿಯಾಗಿರುವುದರಿಂದ ಪರಿಹಾರವನ್ನು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯನ್ನು ದಾಖಲು ಮಾಡಲು ಮಾಹಿತಿಯನ್ನು ನಾನು ಮತ್ತು ನನ್ನ ಮಗಳು ಕೊಟ್ಟಿರುತ್ತೇವೆ. ದಾವೆಯನ್ನು ದಾಖಲು ಮಾಡುವ ಪೂರ್ವದಲ್ಲಿ ದಾವಾಸ್ತಿಗಳು ಅಸ್ತಿತ್ವದಲ್ಲಿ ಇರುವ ಬಗ್ಗೆ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ-2 ಪ್ರತಿವಾದಿ 2 ರವರ ಸ್ವಂತ ಆಸ್ತಿಯಾಗಿರುವುದರಿಂದ ನನಗೆ ಸದರಿ ಆಸ್ತಿಯಲ್ಲಿ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಬಸವರಾಜಯ್ಯ ಐನರಾಗಿರುವುದರಿಂದ ಮದುವೆ ಕಾರ್ಯಗಳನ್ನು ಮತ್ತು ಉಪನಯನ ಕಾರ್ಯಗಳನ್ನು ಮತ್ತು ಶಿವರಾಧನೆ ಕಾರ್ಯಕ್ರಮಗಳನ್ನು ಮಾಡುತ್ತಿದ್ದರು ಎಂದರೆ ಸರಿ. ಅದೇ ಕೆಲಸವನ್ನು 1 ಮತ್ತು 2 ನೇ ಪ್ರತಿವಾದಿಯವರು ಮಾಡುತ್ತಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಗಂಡ ಹೊಲ ಮನೆ ಮತ್ತು ಗ್ಯಾರೇಜ್ ಕೆಲಸ ಮಾಡುತ್ತಾರೆ.

1 ನೇ ಪ್ರತಿವಾದಿ ಬೇರೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಅದೇ ರೀತಿ 2 ಮತ್ತು 3 ಪ್ರತಿವಾದಿಯವರು ಕೂಡ ಇತ್ತೀಚೆಗೆ ಬೇರೆ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ದಾವಣಗೆರೆ.

ಓ ಎಸ್ ಃ335/2022
ಪಿ ಡಬ್ಲ್ಯೂಃ1